ಕರಗಲಿ ಧಗೆ ಹಬ್ಬಲಿ ನಗೆ

# ನಮ್ಮ ಪರ್ಸಿಗೆ ಕಾಸಿಡಬೇಕೆಂದು ಯಾರೂ ಬರಲ್ಲ!

ವಿನೋದ ಗೊಬ್ಬರಗಾಲ
ಕಲರ್ಸ್ ಕನ್ನಡದ
'ಗಿಚ್ಚಿ ಗಿಲಿಗಿಲಿ' ನಟ



**◆ ನಗೆಚಾಟಿಕೆ ಡೈಲಾಗ್ ಹೊಡೆಯಲು ಅಭಿಮಾನಿಗಳು ದುಂಬಾಲು ಬಿದ್ದರೆ...**

ಜನ ನೆರೆದು ಮಾತನಾಡಿದರೆ ಖುಷಿ ಆಗುತ್ತದೆ. ನನಗೆ ಏನು ಗೊತ್ತಿದೆ ಅದನ್ನು ಅವರ ಜೊತೆ ಹಂಚಿಕೊಳ್ಳುತ್ತೇನೆ. ಅವರು ನಿರೀಕ್ಷೆ ಮಾಡುವುದರಲ್ಲಿ ತಪ್ಪೇನೂ ಇಲ್ಲ. ಹಾಗೆಂದು ಇದುವರೆಗೆ ಯಾರೂ ರೇಗಿಸುವುದಾಗಲಿ ಕಾಡಿಸುವುದಾಗಲಿ ಮಾಡಿಲ್ಲ. ಹಾಸ್ಯ ನಟನಾದ್ದರಿಂದ ತಮಾಷೆಯಿಂದ ಅವರ ಜೊತೆ ಮಾತನಾಡುವುದು ಸುಲಭ. ಅಭಿಮಾನದಿಂದ ಒಂದೆರಡು ಮಾತನ್ನು ಆಡಲು ಬಯಸುತ್ತಾರೆ ಅಷ್ಟೇ.

**◆ ನಿಮ್ಮ ಹಿನ್ನೆಲೆಯನ್ನು ಒಮ್ಮೆ ನೆನಪಿಸಬಹುದಾ?**

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಗೊಬ್ಬರಗಾಲ ನನ್ನೂರು. ಅಮ್ಮ ಲೀಲಾವತಿ, ಅಪ್ಪ ನಂಜಪ್ಪ ಆಚಾರಿ. ಚಿನ್ನಾಭರಣ ತಯಾರಿಕೆ ಮಾಡುತ್ತಿದ್ದೆ. ಚಿನ್ನದ ಬೆಲೆ ಸಿಕ್ಕಾಪಟ್ಟೆ ಏರಿದ್ದರಿಂದ ಆ ಕೆಲಸ ಮಾಡುವುದು ತುಂಬ ಕಷ್ಟ ಆಯಿತು. ನಂತರ ನನ್ನ ತಾತನಿಂದ ಬಳುವಳಿಯಾಗಿ ಬಂದಿದ್ದ ಬಡಗಿತನ (ಕಾರ್ಪೆಂಟರ್ ಕೆಲಸ) ಮುಂದುವರಿಸಿದೆ. ಆಗಲೇ ನನಗೆ ಕಲೆಯ ಅಭಿರುಚಿ ಹತ್ತಿತ್ತು. ಆದರೆ ಆ ನಿಟ್ಟಿನ ಪ್ರಯತ್ನವನ್ನು ಮಾಡುವ ಬಗ್ಗೆ ಗೊತ್ತಿರಲಿಲ್ಲ. ನಮ್ಮ ಚಿಕ್ಕಮ್ಮ ಶೋಭಾ ಅವರು ಬೆಂಗಳೂರಿಗೆ ನನ್ನನ್ನು ಕರೆದುಕೊಂಡು ಬಂದರು. ಇಲ್ಲಿಗೆ ಬಂದ ಮೇಲೆ ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣಗೌಡ ಅವರ ಕಚೇರಿ ಸಹಾಯಕನಾಗಿ ಕೆಲಸಕ್ಕೆ ಸೇರಿದೆ. ಕೆಲಸ ಮಾಡುತ್ತಲೇ ಆಡಿಷನ್ ನೀಡುತ್ತಿದ್ದೆ. ನಾಲ್ಕೈದು ಬಾರಿ ಆಡಿಷನ್ ನೀಡಿದರೂ ಒಂದಕ್ಕೂ ಆಯ್ಕೆ ಆಗಲಿಲ್ಲ. 'ಮಜಾಭಾರತ'ಕ್ಕೆ ಅವಕಾಶ ಸಿಕ್ಕಿತು. ಆದರೆ ಪೂರ್ಣ ಪ್ರಮಾಣದಲ್ಲಿ ಕಾಣಿಸಿಕೊಳ್ಳಲು ಸಾಧ್ಯ ಆಗಲಿಲ್ಲ. ಆರಂಭದಲ್ಲಿ ಒಂದು–ಎರಡು ಡೈಲಾಗ್ ಪಾತ್ರಗಳ ಮೂಲಕ ಬೆಳೆಯುತ್ತಾ ಬಂದಿದ್ದೇನೆ. 'ಕಾಮಿಡಿ ಟಾಕೀಸ್', 'ಗಿಚ್ಚಿ ಗಿಲಿಗಿಲಿ', 'ನಮ್ಮಮ್ಮ ಸೂಪರ್ ಸ್ಟಾರ್', 'ರಾಜಾ ರಾಣಿ'ಯಲ್ಲಿ ಕಾಮಿಡಿ ಮಾಡುತ್ತಲೇ ಬಂದಿದ್ದೇನೆ. ಇದರ ಜೊತೆ ಕೆಲವು ಸಿನಿಮಾಗಳಲ್ಲಿಯೂ ನಟಿಸುತ್ತಿದ್ದೇನೆ.

**◆ ನಿಮಗೆ ತುಂಬ ಲವ್ ಪ್ರಪೋಸಲ್ ಬಂದಿವೆಯಂತೆ...**

ಅದಕ್ಕೇನು ಬರುತ್ತಿರುತ್ತವೆ. ಅದು ಆಕರ್ಷಣೆಯಷ್ಟೇ. ನನ್ನನ್ಯಾರು ಲವ್ ಮಾಡ್ತಾರೆ. ಆ ರೀತಿ ಕೇಳುವವರು ಏನಾದರೂ ನನ್ನ ಪರಿಸ್ಥಿತಿ ನೋಡಿದರೆ ಅವರ ಉತ್ಸಾಹ ಮಂಜಿನಂತೆ ಕರಗುತ್ತದೆ. ವಾಸ್ತವ ಅರ್ಥವಾದರೆ, 'ಅಯ್ಯೋ ದೇವರೆ ಅವನ ಪರ್ಸಿಗೆ ನಾನೇ ಕಾಸು ಹಾಕಬೇಕು' ಎಂದು ದೂರ ಸರಿಯುತ್ತಾರೆ.

**◆ 'ಬಿಗ್‌ಬಾಸ್' ಜೀವನ ಹೇಗಿತ್ತು?**

ನಾನು ಅಲ್ಲಿಗೆ ಆಯ್ಕೆ ಆಗಿದ್ದೇ ತೀರ ಆಕಸ್ಮಿಕ. ಕಲರ್ಸ್ ಕನ್ನಡ ನನ್ನ ಮನೆ ಇದ್ದಂತೆ ಇದೆ. ನಾಳೆ ಹೋಗಬೇಕು ಎಂದು ರಾತ್ರಿ 12 ಗಂಟೆಗೆ ಮಾಹಿತಿ ನೀಡಿದರು. ಬಿಗ್‌ಬಾಸ್ ಮನೆಯಲ್ಲಿ ನಾಯಕನಾಗಿ ಆಯ್ಕೆ ಆಗಿದ್ದು ಅಭೂತಪೂರ್ವ ಅನುಭವ. ಎರಡು ಬಾರಿ ಕಿಚ್ಚನ ಚಪ್ಪಾಳೆ ಗಿಟ್ಟಿಸಿದ್ದೂ ಅತ್ಯಂತ ಸಂತೋಷ ಕೊಟ್ಟಿದೆ. ಊರಲ್ಲಿ ನಮ್ಮ ಮನೆ ಮಳೆ ಬಂದರೆ ಸೋರುತ್ತದೆ. ವ್ಯವಸ್ಥಿತವಾದ ಮನೆ ಇಲ್ಲ. 'ಬಿಗ್ ಬಾಸ್' ಮನೆಯಿಂದ ಬಂದಕೂಡಲೇ ಮನೆ ಕಟ್ಟಿಸಿಕೊಡುತ್ತೇನೆ ಎಂದು ನನ್ನ ಅಮ್ಮನಿಗೆ ಮಾತು ಕೊಟ್ಟಿದ್ದೆ. ಆದರೆ ಆ ಮಾತು ಈಡೇರಿಸಲು ಆಗಲಿಲ್ಲ. ಕೊರೊನಾದಿಂದ ಎರಡು ವರ್ಷ ಕೆಲಸ ಇಲ್ಲದೆ ತುಂಬ ಸಂಕಷ್ಟವನ್ನು ಎದುರಿಸಿದ್ದೇನೆ. ಈ ವರ್ಷ ಮನೆ ಕಟ್ಟಿಸುವುದು ನನ್ನ ಮೊದಲ ಆದ್ಯತೆ.

**◆ ಮಹಿಳೆಯ ವೇಷ ಹಾಕುವುದು ಸಂಕೋಚ ಅನ್ನಿಸುವುದಿಲ್ಲವೆ?**

ಲೇಡಿ ಗೆಟಪ್ ತುಂಬ ಹಾಕಿದ್ದೇನೆ. ಮಹಿಳಾ ಪಾತ್ರ ಮಾಡಿದರೆ ನಾವು ಹೇಗೆ ಕಾಣುತ್ತೇವೆ ಎನ್ನುವುದನ್ನು ನೋಡಬೇಕು ಎನ್ನುವ ಕುತೂಹಲ ಇರುತ್ತದೆ. ನಾವೂ ಮಹಿಳೆಯರಷ್ಟೇ ಎಚ್ಚರಿಕೆ ತೆಗೆದುಕೊಂಡು ಅದನ್ನು ಮಾಡುತ್ತೇವೆ. ನಿಜಕ್ಕೂ ಅದು ಕಷ್ಟದ ಕೆಲಸ. ಯಾವುದೇ ಪಾತ್ರವನ್ನು ನಾವು ಅನುಭವಿಸಿ ಮಾಡಬೇಕು. ಮಹಿಳೆಯರಂತೆಯೇ ಯೋಚಿಸಬೇಕಾಗುತ್ತದೆ. ಅವರಂತೆಯೇ ನಮ್ಮ ಹಾವಭಾವವನ್ನು ಪ್ರಕಟಿಸಬೇಕು. ಪಾತ್ರ ಅಂದ ಮೇಲೆ ನಟನಾಗಿ ಅದಕ್ಕೆ ಮೊದಲು ಗೌರವ ಕೊಡಬೇಕು. ಮುಜುಗರ ಅನ್ನುವುದಕ್ಕಿಂತ ನಮ್ಮನ್ನು ನಾವೇ ನೋಡಲು ನಾಚಿಕೆಯಾಗುತ್ತದೆ. ಎಷ್ಟು ಕರಾಬ್ ಇದೀನಲ್ಲ ಎಂದೂ ಅನ್ನಿಸುತ್ತೆ. ಆದರೂ ಪಾತ್ರ ನಿರ್ವಹಣೆ ಮಾತ್ರ ಖುಷಿ ಕೊಡುತ್ತದೆ.

■ ರಾಘವೇಂದ್ರ ಕೆ.